ಪ್ರವಾಸೋದ್ಯಮ ಕೇಂದ್ರವಾಗಿ ಘೋಷಣೆ

94(810) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪು ವಿಧಾನ ಸಭಾ ಕ್ಷೇತ್ರದ ಕಾಪು ಕಡಲ ಕಿನಾರೆಯ ಪ್ರಸಿದ್ಧ ದೀಪಸ್ಥಂಭದ ಪ್ರದೇಶವನ್ನು ಪ್ರವಾಸೋದ್ಯಮ ಕೇಂದ್ರವಾಗಿ ಅಧಿಕೃತವಾಗಿ ಘೋಷಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಕಾಪು ಕಡಲ ಕಿನಾರೆಯಲ್ಲಿ ವರ್ಷಂಪ್ರತಿ ಲಕ್ಷಾಂತರ ಪ್ರವಾಸಿಗರು ಬರುತ್ತಿರುವುದರಿಂದಾಗಿ ಈಜಾಡುವ ಸಂದರ್ಭದಲ್ಲಿ ಅಪಾಯಕಾರಿ ಸನ್ನಿವೇಶವಿದ್ದು, "ಜೀವ ರಕ್ಷಕ ದಳ" ರಚನೆ ಮಾಡಲು ಸರ್ಕಾರ ಯೋಚಿಸಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ "ಜೀವ ರಕ್ಷಕ ದಳ" ಪ್ರಾರಂಭಿಸಲಾಗುವುದು;

ಈ) ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಿ. ಜನಾರ್ಧನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು)

ಅ) ಇಲ್ಲ.

ಆ) ಈ ವಿಷಯವು ಪ್ರವಾಸೋದ್ಯಮ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಪ್ರವಾಸೋದ್ಯಮ ಇಲಾಖೆಯಿಂದ ಕಾಪು ಕಡಲ ಕಿನಾರೆಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

1) ಪ್ರವಾಸಿಗರ ಅನುಕೂಲಕ್ಕಾಗಿ ಶೌಚಾಲಯವನ್ನು ನಿರ್ಮಿಸಲಾಗಿದೆ.

2) ಕಾಪು ಕಡಲತೀರದಲ್ಲಿ ಸೇತುವೆ ನಿರ್ಮಾಣ ಪಾರ್ಕಿಂಗ್ ವ್ಯವಸ್ಥೆ, ಸಂಪರ್ಕ ರಸ್ತೆ, ವಿದ್ಯುದೀಕರಣ ಹಾಗೂ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ರೂ. 55.00 ಲಕ್ಷಗಳನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ

ಸಮಿತಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿದೆ.

ಶ್ರೀ ಲಾಲಾಜಿ ಆರ್. ಮೆಂಡನ್: ಉತ್ತರವನ್ನು ಕೊಡಲಾಗಿದೆ. ನಮ್ಮ ಕಾಪು ಸಮುದ್ರ ಕಿನಾರೆಯಲ್ಲಿ, ಬ್ರಿಟಿಷರ ಕಾಲದಲ್ಲಿ, ಸ್ವಾತಂತ್ರ್ಯ ಪೂರ್ವದಲ್ಲಿ ಕಟ್ಟಲ್ಪಟ್ಟ ಒಂದು ಪ್ರಸಿದ್ಧ ದೀಪಸ್ಥಂಭವಿದೆ. ಇದು ಭಾರತದಲ್ಲೇ ಎರಡನೇ ಅತಿ ಎತ್ತರದ ದೀಪಸ್ಥಂಭವಿದ್ದು. ಲಕ್ಷಾಂತರ ಜನ ಪ್ರವಾಸಿಗರು ಬರುವಂಥ ಪ್ರದೇಶವಾಗಿದೆ. ಅಲ್ಲಿಗೆ ಪ್ರವಾಸೋದ್ಯಮ ಸಚಿವರಾದ ಶ್ರೀ ಜನಾರ್ಧನರೆಡ್ಡಿ ಯವರು ಸಹ ನಮ್ಮ ಕಾಪು ಸ್ಥಳಕ್ಕೆ ಭೇಟಿ ಕೊಟ್ಟು ಸ್ಥಳ ಪರಿಶೀಲನೆ ಮಾಡಿದ್ದಾರೆ. ಮತ್ತು ಒಂದು ಭರವಸೆಯನ್ನೂ ಸಹ ಕೊಟ್ಟಿದ್ದಾರೆ. ಅಲ್ಲಿ ರಸ್ತೆಗಳು ಬಹಳ ಕಿರಿದಾಗಿವೆ. ಮೂಲಭೂತ ಸೌಲಭ್ಯಗಳು ಕೂಡ ಸರಿಯಾಗಿ ಇಲ್ಲದ ಕಾರಣ ಹಿಂದಿನ ಪ್ರವಾಸೋದ್ಯಮ ಸಚಿವರು 55 ಸಾವಿರ ರೂ. ಘೋಷಣೆ ಮಾಡಿದ್ದಾರೆ. ಕೆಲಸ ಇನ್ನೂ ಕಾರ್ಯಗತವಾಗಿಲ್ಲ. ರಸ್ತೆಗಳ ಅಗಲೀಕರಣಕ್ಕೆ, ಮಣಿಪಾಲದಂತಹ ವಿದ್ಯಾಸಂಸ್ಥೆಗಳಲ್ಲಿ 56 ದೇಶದ ವಿದ್ಯಾರ್ಥಿಗಳಿದ್ದಾರೆ. ಬೇರೆ ಬೇರೆ ಪ್ರವಾಸಿಗರು ಬರುವಂತಹ ಸಂದರ್ಭದಲ್ಲಿ ತುಂಬಾ ಜನ ಜೀವ ಕಳೆದುಕೊಂಡವರು ಇದ್ದಾರೆ. ಅದಕ್ಕಾಗಿ ಹಲವಾರು ಜನ ಸಂಕಷ್ಟದಲ್ಲಿದ್ದವರನ್ನು ಪಾರು ಮಾಡಲಾಗಿದೆ. ಅದನ್ನು ಪ್ರವಾಸಿ ಸ್ಥಳವನ್ನಾಗಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೋರುತ್ತೇನೆ. ಅದನ್ನು ಪ್ರವಾಸಿ ತಾಣವನ್ನಾಗಿ ಘೋಷಣೆ ಮಾಡಿ. ಮೂಲಭೂತ ಸೌಲಭ್ಯ ಕಲ್ಪಿಸಲು ತಾವು ಸಹಕರಿಸಬೇಕು. ವಿಶೇಷವಾಗಿ ಅಲ್ಲಿನ ರಸ್ತೆಗೆ ಮತ್ತು ಬೇರೆ ಬೇರೆ ಮೂಲಭೂತ ಸೌಲಭ್ಯಗಳಾದ ಶೌಚಾಲಯಗಳ ಸಮಸ್ಯೆ ಮತ್ತು ಕುಡಿಯುವ ಸಿಹಿನೀರಿನ ಸಮಸ್ಯೆಯಿದೆ. ಅಲ್ಲಿ ಉಪ್ಪುನೀರಿದೆ. ಮೊನ್ನೆ ನಮ್ಮ ಲಾಲ್‌ಬಹದ್ದೂರ್ ಶಾಸ್ತ್ರಿ sports and culture clubನವರ ಒಂದು ಸ್ನೇಹದ ಕಡಲಲ್ಲಿ Beach Festivalಗೆ, ಕಡಲ ಉತ್ಸವಕ್ಕೆ ಸುಮಾರು 10–12 ಸಾವಿರ ಜನ ಬಂದಿದ್ದರು. ವಾಹನ ದಟ್ಟಣೆಯಿಂದಾಗಿ ಸುಮಾರು ಒಂದು ಕಿ.ಮೀ.ವರೆಗೆ ವಾಹನಗಳ ಸಾಲು ಇತ್ತು. ಅದಕ್ಕಾಗಿ ಮೂಲಭೂತ ಸೌಲಭ್ಯ ಕಲ್ಪಿಸಲಿಕ್ಕೆ ಮಾನ್ಯ ಸಚಿವರು ವಿಶೇಷವಾಗಿ ನಮಗೆ ಸಹಕರಿಸಬೇಕು.

ಅಧ್ಯಕ್ಷರು: ನೀವು ಪ್ರಶ್ನೆ ಕೇಳಿ. Please ನೀವು ಉತ್ತರ ಹೇಳಿ. ಅವರು ಹೇಳುತ್ತಿರುವುದು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. Please ಕುಳಿತುಕೊಳ್ಳಿ. ನೀವು ಉತ್ತರ ಹೇಳಿ.

(ಗೊಂದಲ)

ಶ್ರೀ ಯು.ಟಿ.ಖಾದರ್: ಮಾನ್ಯ ಮಂತ್ರಿಗಳೇ, ತಾವು ಬೇರೆ ಕಡೆಗಳಲ್ಲಿ ಕೊಡುತ್ತಿದ್ದೀರಿ. ಬಹುಶ: ಮಲ್ಪೆ ಮತ್ತು ಪೆಣಂಬೂರು ಬೀಚ್, ಉಳ್ಳಾಲ ಬೀಚ್ ಇದೆ . . .

ಅಧ್ಯಕ್ಷರು: ಇದು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ನೀವು ಉಳ್ಳಾಲಕ್ಕೆ ಕೇಳಿದರೆ ಹೇಗೆ? ಬೇರೆ ಕೇಳಿ.

ಶ್ರೀ ಯು.ಟಿ.ಖಾದರ್: ಇದು ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟಿದ್ದು.

ಅಧ್ಯಕ್ಷರು: ಅವರು ಪ್ರವಾಸೋದ್ಯಮಕ್ಕೆ ಕೇಳಿಲ್ಲ. ಅವರ ಕ್ಷೇತ್ರದ್ದು ಒಂದು particular place ಕೇಳಿದ್ದಾರೆ. ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ general ಆಗಿ ಕೇಳಿಲ್ಲ. ಬೀಚ್ ಆದರೂ ಅವರು ಅವರ area ದ ವಿಷಯ ಕೇಳಿದ್ದಾರೆ. ನಿಮ್ಮ ಉಳ್ಳಾಲದ್ದು ಕೇಳಿಲ್ಲ.

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಇವತ್ತು ಏನು ಕೇಳಿದ್ದಾರೆ ಅದಕ್ಕೆ ಮೊದಲನೆಯದಾಗಿ ಕಾಮ ಕಡಲತೀರದಲ್ಲಿ ಪ್ರಸಿದ್ಧವಾಗಿರುವಂತಹ ದ್ವೀಪ ಸ್ತಂಭವನ್ನು ಪ್ರವಾಸೋದ್ಯಮ ತಾಣವನ್ನಾಗಿ ಇವತ್ತು ಈಗಾಗಲೇ ನಮ್ಮ ಪಟ್ಟಿಯಲ್ಲಿ ಗುರುತು ಮಾಡಿದ್ದೇವೆ ಎಂದು ಹೇಳುವುದಕ್ಕೆ ನಾನು ಸಂತೋಷ ಪಡುತ್ತೇನೆ.

ಎರಡನೆಯದಾಗಿ, green police ಎಂದು ಪ್ರವಾಸೋದ್ಯಮ ವತಿಯಿಂದ ಇವತ್ತು ನಾವು ಪ್ರಾರಂಭ ಮಾಡಿದ್ದೇವೆ. ಇಬ್ಬರು green policeರನ್ನು ಕೂಡ ನಾವು ಅಲ್ಲಿ allocation ಮಾಡಿದ್ದೇವೆ. ಜೊತೆಗೆ ತಾವು ಏನು ಇವತ್ತು ಮೂಲಭೂತ ಸೌಲಭ್ಯಗಳ ಬಗ್ಗೆ ಕೇಳಿದ್ದೀರಿ, ಅದು ಮೊನ್ನೆ ಇದೇ ತಿಂಗಳ ಮಾರ್ಚ್-3ನೇ ತಾರೀಖು ಸುಮಾರು ರೂ. 55 ಲಕ್ಷ ಹಣದಲ್ಲಿ ಕೆಲವೊಂದು ಮೂಲಭೂತ ಸೌಲಭ್ಯಗಳಿಗೆ ನಾವು ಎಲ್ಲದನ್ನೂ ಕೂಡ ಅನುಮೋದನೆ ಕೊಟ್ಟಿದ್ದೇವೆ. ಇನ್ನೂ ಕೂಡ ತಾವು ಏನೇನು ಹೇಳಿದ್ದೀರಾ,

ಅವೆಲ್ಲದರ ಬಗ್ಗೆ ಕೂಡ ರಸ್ತೆ ಆಗಿರಬಹುದು, ಪಾರ್ಕಿಂಗ್ ಆಗಿರಬಹುದು, ವಿದ್ಯುತ್ ದೀಪಗಳನ್ನು ಅಳವಡಿಸುವಂತಹ ಒಂದು ವಿಷಯವಾಗಿರಬಹುದು, ಈ ಎಲ್ಲಾ ವಿಚಾರಗಳನ್ನು ಕೂಡ ರೂ.55 ಲಕ್ಷದಲ್ಲಿ ಅನುಮೋದನೆ ಕೊಟ್ಟಿದ್ದೇವೆ. ಈ ಕೆಲಸ ಅತೀ ಶೀಘ್ರದಲ್ಲಿ ಕೆಲವೇ ದಿವಸಗಳಲ್ಲಿ ಪ್ರಾರಂಭವಾಗುತ್ತದೆ.

ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕುರಿತು

95(675) ಶ್ರೀ ರಹೀಂ ಖಾನ್ (ಬೀದರ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ಛತ್ರಪತಿ ಶಿವಾಜಿ ಮಹಾರಾಜರವರ ಜಯಂತಿಯು ದೇಶದ ಎಲ್ಲಾ ಕಡೆ ವಿಜೃಂಬಣೆಯಿಂದ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಜಯಂತಿಯಂದು ಸರ್ಕಾರವು ಸಾರ್ವಜನಿಕ ರಜಾ ಘೋಷಣೆ ಮಾಡುವ ತೀರ್ಮಾನ ಕೈಗೊಂಡಿದೆಯೇ;

ಇ) ಹಾಗಿದ್ದಲ್ಲಿ, ಯಾವ ವರ್ಷದಿಂದ ರಜಾ ಘೋಷಣೆ ಮಾಡಲಾಗುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿ)

ಅ) ಹೌದು.

ಆ) ರಜಾ ಘೋಷಣೆ ಮಾಡುವ ಬಗ್ಗೆ ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಂಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ರಹೀಂ ಖಾನ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಶ್ರೀ ಛತ್ರಪತಿ ಶಿವಾಜಿ ಮಹಾರಾಜರವರ ಬಗ್ಗೆ ಇದೆ. ನಾನು ಈ ಮೊದಲು ಈ ಪ್ರಶ್ನೆ ಕೇಳಿದ್ದೇನೆ. ಪ್ರಶ್ನೆ ಸಂಖ್ಯೆ 'ಅ'ಗೆ ಸಂಬಂಧಿಸಿದಂತೆ ನಮ್ಮ ದೇಶದಲ್ಲಿ ಶಿವಾಜಿ ಮಹಾರಾಜರವರ ಜಯಂತಿ ದೇಶದ ಎಲ್ಲಾ ಕಡೆ ವಿಜೃಂಭಣೆಯಿಂದ ನಡೆಯುತ್ತಿರುವುದು ಅವರಿಗೆ ಗೊತ್ತಿದೆ ಎಂದು ಹೇಳಿದ್ದಾರೆ. ಪ್ರಶ್ನೆ ಸಂಖ್ಯೆ 'ಆ'ನಲ್ಲಿ ಏನು ಹೇಳಿದ್ದಾರೆ ಎಂದರೆ, last time CM ರವರು ನಮ್ಮ ಬೀದರ್